**LAC(A) 408/2022**
**PW-1**

**ದಿನಾಂಕ 24-01-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ- ಅರ್ಜಿದಾರರ ಪರ ವಕೀಲರಿಂದಃ-**

**ಈ ಕೇಸಿನಲ್ಲಿ ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣಪತ್ರ ಸಲ್ಲಿಸುತ್ತಿದ್ದೇನೆ. ಪ್ರಮಾಣಪತ್ರದಲ್ಲಿರುವ ಮಾಹಿತಿ ಸರಿ ಇದ್ದು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.**

Ex.P-1 Certified copy of Judgment and Award in LAC No. 10/2010.

Ex.P-2 Certified copy of Judgment and Award in LAC No. 166/2017.

**ಪಾಟೀಸವಾಲುಃ- ಎದುರುದಾರರ ಪರ ಡಿ ಜಿ ಪಿ ವಕೀಲರಿಂದಃ-**

ನಾನು ನಿಲಂಗಾಲ ಗ್ರಾಮದ ವಾಸಿ. ನಿಲಂಗಾಲ ಗ್ರಾಮದ ಭೂಸ್ವಾಧೀನವಾದ ನನ್ನ ಜಮೀನಿನ ಸರ್ವೇ ನಂ. 2/4 ಮತ್ತು 39 ರಲ್ಲಿ 1 ಎಕರೆ 16 ಗುಂಟೆ ಜಮೀನಿದ್ದು, 1 ಎಕರೆ 16 ಗುಂಟೆ ಸ್ವಾಧೀನಪಡಿಸಿಕೊಂಡಿದ್ದಾರೆ. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ಪರಿಹಾರದ ಹಣ ಪಡೆದಿದ್ದೇನೆ ಎಂದರೆ ಸರಿ. ಬೇರೆ ಯಾವ ನ್ಯಾಯಾಲಯದಲ್ಲಿಯೂ ನಾನು ಪರಿಹಾರಕ್ಕಾಗಿ ಪ್ರಕರಣ ದಾಖಲು ಮಾಡಿಲ್ಲ. ನನಗೆ ತಿಳುವಳಿಕೆ ಇಲ್ಲದ ಕಾರಣ ಮೇಲ್ಮನವಿ ತಡವಾಗಿ ಸಲ್ಲಿಸಿದ್ದೇನೆ. ಹೆಚ್ಚಿನ ಪರಿಹಾರ ಪಡೆಯಲು ನಮ್ಮ ಪಕ್ಕದ ಜಮೀನಿನವರು ಹೊಣ್ಣಹಲಗೇಗೌಡರವರು ನಡೆಸಿ ಕೆಳನ್ಯಾಯಾಲಯದಲ್ಲಿ ಅಂತಿಮ ಪರಿಹಾರ ಪಡೆದಿದ್ದಾರೆ ಎನ್ನುವುದು ನಿಜ. ನಾನು ಕಾಲಮಿತಿ ಅವಧಿಯಲ್ಲಿ ಮೇಲ್ಮನವಿ ಸಲ್ಲಿಸಿದ ಕಾರಣ ನನಗೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿಗೆ ಹೆಚ್ಚು ಬೆಲೆ ಇಲ್ಲದಿದ್ದರೂ ಕೂಡ ಹೆಚ್ಚು ಪರಿಹಾರ ಕೋರಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೇಲ್ಮನವಿಯನ್ನು 3385 ದಿನಗಳ ವಿಳಂಬಕ್ಕೆ ಯಾವುದೇ ಸೂಕ್ತ ಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾದ ನ್ಯಾಯಾಲಯದ ಶುಲ್ಕ ಕಟ್ಟದ ಕಾರಣ ಹೆಚ್ಚಿನ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆಚ್ಚಿನ ಪರಿಹಾರ ಕೇಳಲು ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.